ಶ್ರೀ ವಸಂತ, ಏ. ಸಾಲಿಯಾನ : ಮಾನ್ಯ ಅಧ್ಯಕ್ಷರೇ ನಮ್ಮ ಇಲಾಖಾಧಿಕಾರಿಗಳು ತಪ್ಪು ಮಾಹಿತಿ ಕೊಡಲಿಲ್ಲ. ನನಗೆ ತಿಳಿದ ಪ್ರಕಾರ ಆ ಮಂಜುಗೆಡ್ಡೆ ಕಾರ್ಖಾನೆ ಆ ಭಾಗದಲ್ಲಿ ಒಂದು ವೇಳೆ ಪ್ರಾರಂಭಿಸದಿದ್ದರೂ ಸಹ ಬೇಕಾದಷ್ಟು ಐಸ್ ಪ್ಲಾಂಟ್‌ಗಳು ಅಲ್ಲಿರುವುದರಿಂದ ಯಾವುದೇ ಮೀನುಗಾರರಿಗೆ ತೊಂದರೆಯಾಗದ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಮಾನ್ಯ ಸದಸ್ಯರು ಅಲ್ಲಿ ಆ ಐಸ್ ಪ್ಲಾಂಟ್ ಮೆಷಿನರಿಗಳನ್ನು ಚೇಂಜ್ ಮಾಡಿ ಅದಕ್ಕೆ ಆಗತ್ಯವಿದೆ ಎನ್ನುವ ರೀತಿಯಲ್ಲಿದ್ದರೆ ಖಂಡಿತವಾಗಿ ನಾನು ಪರಿಶೀಲಿಸಿ ಅದಕ್ಕೆ ಬೇಕಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಕೇಳುವುದಕ್ಕೆ ಮೊದಲು ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ ಇವೊತ್ತು ಹದಿನೈದು ಪ್ರಶ್ನೆಗಳಿಗೂ ಉತ್ತರಗಳು ಬಂದಿದೆ. ದಯವಿಟ್ಟು ಯಾರು ಪ್ರಶ್ನೆಗೆ ಸಂಬಂಧಪಟ್ಟಿರುತ್ತಾರೋ ಮೂಲ ಪ್ರಶ್ನೆ ಕೇಳಿರುವವರು ಅವರು ಮಾತ್ರ ಕೇಳಿ ಸಹಕರಿಸಬೇಕು ಇವೊತ್ತೇನಾದರೂ ಪ್ರಶ್ನೆಗಳು ಲ್ಯಾಪ್ಸ್ ಆದರೆ ಮುಂದಿನ ವಾರ ಬರುತ್ತದೋ ಇಲ್ಲವೋ ಎಂದು ನಾನು ಹೇಳುವುದಕ್ಕಾಗುವುದಿಲ್ಲ. I can't guarantee you

ಎರಡನೆಯ ಪ್ರಕಟಣೆ, ಮಾನ್ಯ ಸಭಾಪತಿಯವರು ಬಂದು ಏತಕ್ಕೆ ರಾಜೀನಾಮೆ ಕೊಟ್ಟಿದ್ದರು ಎಂಬುದನ್ನು ಹೇಳಬೇಕು.

ಅಧ್ಯಕ್ಷರು: ಅವರದು ಪ್ರಶ್ನೆಯಿದೆ, ಅವರ ಪ್ರಶ್ನೆ ಹೊರಹೋಗುತ್ತದೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ. ಇಲ್ಲದಿದ್ದರೆ ಆ ಮೇಲೆ ಅನೌನ್ಸ್ ಮಾಡುತ್ತಿದ್ದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅವರು ಏಕೆ ರಾಜೀನಾಮೆ ಕೊಟ್ಟರು ಎಂಬ ಬಗ್ಗೆ ಸದನಕ್ಕೆ ಬಂದು ಹೇಳಬೇಕು.

ಅಧ್ಯಕ್ಷರು : ಅವರು ಬರುವುದಕ್ಕೆ ಮೊದಲು ಅನೌನ್ಸ್ ಮಾಡಬೇಕೆಂದು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ. ಮುಂದಿನ ಪ್ರಶ್ನೆ ಶಿವಳ್ಳಿ ಚನ್ನಬಸಪ್ಪ, ಆರಗಜ್ಞಾನೇಂದ್ರ, ಸದಸ್ಯರುಗಳು ಗೈರುಹಾಜರಿದ್ದಾರೆ. ಮಾನ್ಯ ಕೆ.ಎನ್. ಸುಬ್ಬಾರೆಡ್ಡಿಯವರು.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಕೀಲರುಗಳಿಗೆ ತರಬೇತಿ ಸಹಾಯಧನ

117 (1226) - ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಕೀಲರುಗಳಿಗೆ ತರಬೇತಿಗಾಗಿ ನೀಡುತ್ತಿರುವ ಸಹಾಯಧನ ಕಡಿಮೆ ಇದ್ದು ಇದನ್ನು ಹೆಚ್ಚಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಆ) ಈ ಸಹಾಯ ಧನವನ್ನು ರಾಜ್ಯದಲ್ಲಿ ಕೆಲವೇ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಕೀಲರುಗಳಿಗೆ ನೀಡುತ್ತಿದ್ದು, ರಾಜ್ಯದಲ್ಲಿ ತರಬೇತಿ ಪಡೆಯುವ ಎಲ್ಲಾ ಪರಿಶಿಷ್ಟ ಜಾತಿ ಪರಿಶಿಷ್ಟ ಪಗಡದ ವಕೀಲರುಗಳಿಗೆ ಸಹಾಯ ಧನ ನೀಡಲು ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಸರ್ಕಾರಿ ಆದೇಶ ಸಂಖ್ಯೆ ಸಕಾ 421 ಪಕವಿ 95 ದಿನಾಂಕ: 29/7/97 ರ ಪ್ರಕಾರ ಶಿಷ್ಯವೇತನವನ್ನು ರೂ. 750.00 ರಿಂದ ರೂ. 1000.00 ಗಳಿಗೆ ಹೆಚ್ಚಿಸಿರುವುದರಿಂದ ಶಿಷ್ಯವೇತನವನ್ನು ಪುನಃ ಹೆಚ್ಚಿಸುವ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ.

ಆ) ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸರ್ಕಾರವು ರಚಿಸಿರುವ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಮುಖಾಂತರ ತರಬೇತಿಗೆ ಆಯ್ಕೆಯಾದ ಎಲ್ಲಾ ಪರಿಶಿಷ್ಟ ಜಾತಿಯ: ಪರಿಶಿಷ್ಟ ಪಂಗಡಗಳ ಕಾನೂನು ಪದವೀಧರರಿಗೆ ಶಿಷ್ಯವೇತನ ನೀಡಲಾಗುತ್ತಿದೆ. ಹಾಗಿದ್ದರೂ, ಫಲಾನುಭವಿಗಳ ಸಂಖ್ಯೆಯನ್ನು ಅನುದಾನಕ್ಕನುಗುಣವಾಗಿ ಪರಿಮಿತಿಗೊಳಿಸಲಾಗುವುದು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಎಷ್ಟು ಜನ ಎಸ್.ಸಿ. ಎಸ್.ಟಿ. ಜನಾಂಗದ ವಕೀಲರು ಬೆಂಗಳೂರಿನಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ? ಎಷ್ಟು ಜನರಿಗೆ ಈ ಸಂಭಾವನೆ ಕೊಡುತ್ತಿದ್ದೀರಿ? ಇಡೀ ರಾಜ್ಯದಲ್ಲಿ ಎಷ್ಟು ಜನ ಎಸ್.ಸಿ. ಎಸ್.ಟಿ, ವಕೀಲರು ಇದ್ದಾರೆ? ಅವರಿಗೆ ಈ ಸಂಭಾವನೆ ಕೊಡುತ್ತಿದ್ದೀರಾ ಅದೇ ರೀತಿ ಹಿಂದೆ ದೇವರಾಜ್ ಅರಸುರವರ ಕಾಲದಲ್ಲಿ ಬಹಳ ಜನ ವಕೀಲರಿಗೆ ಸ್ಟೈಫಂಡ್ ಎಂದು ಕೊಡುತ್ತಿದ್ದರು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇವೆ. ಸ್ಟೈಫಂಡನ್ನು Irrespective of caste, whoever hails from poor family, they must also be given this facility ಎಂದು ಹೇಳಿ ನಾವು ಅನೇಕ ಸಲ ಮೆಮೊರ್ಯಾಂಡಂ ಕೂಡ ಕೊಟ್ಟಿದ್ದೇವೆ. ಅದರ ಬಗ್ಗೆ ಪರಿಶೀಲನೆ ಮಾಡೋಣವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದರು. ಇದರ ಬಗ್ಗೆ ತಮಗೆ ವಿಚಾರವೇನಾದರೂ ಗೊತ್ತಾಗಿದೆಯೇ? ಇದನ್ನು ಯಾವ ರೀತಿಯಲ್ಲಿ ಮಾಡುತ್ತಿದ್ದೀರಿ? ಬೆಂಗಳೂರಿನಲ್ಲಿ ಎಸ್.ಸಿ.ಎಸ್.ಟಿ.ಯ ಎಷ್ಟು ಜನ ವಕೀಲರಿಗೆ ಸ್ಟೈಫಂಡ್ ಕೊಡುತ್ತಿದ್ದೀರಿ? ಎಷ್ಟು ಜನ ಇದಕ್ಕಾಗಿ ಅಪ್ಲಿಕೇಷನ್ಸ್ ಹಾಕಿದ್ದರು? ಎಂಬ ಬಗ್ಗೆ ದಯವಿಟ್ಟು ತಿಳಿಸಿಕೊಡುತ್ತೀರಾ?

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮೂರ್ನಾಲ್ಕು ಪ್ರಶ್ನೆಗಳನ್ನು ಕೇಳಿದ್ದಾರೆ ಟಿಪ್ಪಣಿಯಲ್ಲಿ ಸಂಪೂರ್ಣವಾದ ಮಾಹಿತಿ ಕೊಟ್ಟಿದ್ದೇವೆ. ಆದರೆ ಅವರು ಒಂದು ಹೊಸ ವಿಚಾರವನ್ನು ಪ್ರಾರ್ಥನೆ ಮಾಡಿರುವುದೇನೆಂದರೆ, ಪರಿಶಿಷ್ಟಜಾತಿ ಪರಿಶಿಷ್ಟ ಜನಾಂಗಕ್ಕೆ ಏನು ಈ ಸೌಲಭ್ಯವನ್ನು ಕೊಟ್ಟಿದ್ದೇವೆ ಅದನ್ನು ಗ್ರಾಮೀಣ ಪ್ರದೇಶದಿಂದ ಬರುವಂಥ ಹಿಂದುಳಿದ ವರ್ಗದವರಿಗೂ ಕೂಡ ವಿಸ್ತರಣೆ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ಮುಖ್ಯಮಂತ್ರಿಗಳಿಗೆ ಕೊಟ್ಟಿರುವಂಥ ಮನವಿಯ ಮೇರೆಗೆ ಅದನ್ನು ಪರಿಗಣಿಸುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆರ್ಥಿಕ ಸಂಪನ್ಮೂಲಗವನ್ನು ಗಮನದಲ್ಲಿಟ್ಟುಕೊಂಡು ಸಚಿವಸಂಪುಟವೇ ಇದರ ಬಗ್ಗೆ ತೀರ್ಮಾನ ಕೊಡಬೇಕಾಗುತ್ತದೆ. ಇದಕ್ಕೆ ಒಂದು ಹೊಸ ನೀತಿಯನ್ನೂ ಕೂಡ ರಾಜ್ಯದಲ್ಲಿ ಜಾರಿಗೆ ತರಬೇಕಾಗುತ್ತದೆ. ಆದ್ದರಿಂದ ಆ ಗ್ರಾಮೀಣ ಪ್ರದೇಶದ ಹಿಂದುಳಿದ ಜನರ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಇದಕ್ಕೆ ಸಕಲ ಪ್ರಯತ್ನಗಳನ್ನು ಮಾಡುವಂಥ ಕಾರ್ಯ ಇದೆಯೆಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಬೆಂಗಳೂರಿನಲ್ಲಿ ಎಸ್.ಸಿ.ಎಸ್.ಟಿ ವಕೀಲರು ಎಷ್ಟು ಜನರಿದ್ದಾರೆ? ಎಷ್ಟು ಜನ ಸ್ಟೈಫಂಡ್‌ನ್ನು ಕೇಳಿದ್ದಾರೆ? ಎಷ್ಟು ಜನರಿಗೆ ತಾವು ಗ್ರಾಂಟ್ ಮಾಡಿದ್ದೀರಿ?

ಶ್ರೀ ಎ. ಕೃಷ್ಣಪ್ಪ : ಜಿಲ್ಲಾವಾರು ಪಟ್ಟಿ ಇಲ್ಲಿದೆ. ಅದನ್ನು ಓದಬೇಕೆಂದರೆ ಓದುತ್ತೇನೆ. ಬೆಂಗಳೂರು ನಗರ 53, ಬೆಂಗಳೂರು ಗ್ರಾಮಾಂತರ 21, ಕೋಲಾರ 22, ತುಮಕೂರು 38, ಚಿತ್ರದುರ್ಗ 23 ದಾವಣಗೆರೆ 9 ಶಿವಮೊಗ್ಗ 19, ಮೈಸೂರು 28, ಚಾಮರಾಜನಗರ 13, ಹಾಸನ 6, ಮಂಡ್ಯ 12 ಕೊಡಗು 1, ದಕ್ಷಿಣ ಕನ್ನಡ 4, ಉಡುಪಿ 4, ಚಿಕ್ಕಮಗಳೂರು 9, ಬೆಳಗಾವಿ 27, ಬಿಜಾಪುರ 23, ಬಾಗಲಕೋಟೆ 5, ಧಾರವಾಡ 12, ಗದಗ್ 10, ಹಾವೇರಿ 6, ಉತ್ತರ ಕನ್ನಡ 1 ಗುಲ್ಬರ್ಗಾ 36 ರಾಯಚೂರು 33, ಕೊಪ್ಪಳ 4, ಬಳ್ಳಾರಿ 4, ಬೀದರ್ 5, ಒಟ್ಟು 428 ಅಭ್ಯರ್ಥಿಗಳಿಗೆ ಈ ಸೌಕರ್ಯವನ್ನು ಕರ್ನಾಟಕ ಸರ್ಕಾರ ಒದಗಿಸಿಕೊಟ್ಟಿದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಎಸ್.ಸಿ. ಎಸ್.ಟಿ. ವಕೀಲರಿಗೆ ಸಾವಿರ ರೂಪಾಯಿ ಸ್ಟೈಫಂಡ್ ಕೊಡುತ್ತಿದ್ದೀರಿ. ಅದನ್ನು ಎರಡು ಸಾವಿರ ರೂ ಮಾಡಬೇಕೆಂದು ಅವರು ಮನವಿ ಮಾಡಿದ್ದಾರೆ. ಅದನ್ನು ತಮ್ಮ ಗಮನಕ್ಕೆ ಬಂದಿದೆಯೇ? ತಾವು ಅದನ್ನು ಸಾವಿರದಿಂದ ಎರಡು ಸಾವಿರಕ್ಕೆ ರೂ.ಗೆ ಮಾಡಿಕೊಡಬೇಕು. ಅನೇಕರಿಗೆ ತುಂಬಾ ಕಷ್ಟವಿದೆ. ಇವತ್ತಿನ ದಿವಸ ಸಾವಿರ ರೂಪಾಯಿಯಿಂದ ಏನೂ ಪ್ರಯೋಜನವಾಗುವುದಿಲ್ಲ. ವಕೀಲರು ಬೆಳಿಗ್ಗೆ ಹೊರಟರೆ ಸಂಜೆಯವರೆಗೆ ಹೆಚ್ಚಿನ ರೀತಿಯಲ್ಲಿ ಕೋರ್ಟ್‌ಗಳಲ್ಲಿ ಓಡಾಡಬೇಕು, ಕೆಲಸವಿರುತ್ತದೆ. ಆದ್ದರಿಂದ ತಾವು ಆ ಹಣವನ್ನು ಹೆಚ್ಚು ಮಾಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಹೇಳುವುದಾದರೆ, ಇಟ್ ಈಸ್ ಎನ್ ಆಲೋಯನ್ಸ್, ಎನ್‌ಕರೇಜ್‌ಮೆಂಟ್‌ಗೆ ಅದನ್ನು ಕೊಡುತ್ತಿರತಕ್ಕದ್ದು. ಖರ್ಚು ಪೂರ್ತಿ ನಿಬಾಯಿಸಲಿಕ್ಕೆ ಸರ್ಕಾರಗಳ್ಯಾವುವೂ ಕೊಡಲು ಆಗುವುದಿಲ್ಲ. ಆದ್ದರಿಂದ ತಮ್ಮ ಸಂಘದಿಂದ ಬಂದು ನನ್ನನ್ನೂ ಕೂಡ ಪ್ರತ್ಯೇಕವಾಗಿ ಭೇಟಿ ಮಾಡಿ, ಸರ್ಕಾರ ಕೊಡತಕ್ಕ ಒಂದು ಸಾವಿರ ರೂಪಾಯಿ ಸಾಕಾಗುವುದಿಲ್ಲವೆಂದು ಮನವಿಯನ್ನು ಕೊಟ್ಟಿದ್ದಾರೆ. ವಿಧಿ ಇಲ್ಲದೆಯೇ ಹೇಳಬೇಕು, ಸರ್ಕಾರದ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಅದನ್ನು ಹೆಚ್ಚು ಮಾಡುವಂಥ ವಿಚಾರವಿದೆ. ಮುಂದಿನ ಆಯವ್ಯಯದಲ್ಲಿ ಇದಕ್ಕೆ ಏನಾದರೂ ಅವಕಾಶ ಮಾಡುವುದಕ್ಕೆ ಸಾಧ್ಯವಿದೆಯೆಂಬ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಬಾರ್‌ಕಾನ್ಸಿಲ್‌ನಲ್ಲಿ ಎನ್‌ರೋಲ್‌ಮೆಂಟ್ ಆಗುವಾಗ ಐದು ಸಾವಿರ ರೂಪಾಯಿ ಎಸ್.ಸಿ. ಎಸ್.ಟಿ.ಯವರಿಗೆ ಕೊಡುತ್ತಿದ್ದಾರೆ. ಎಷ್ಟು ಜನ ವಕೀಲರಿಗೆ ಇದನ್ನು ಕೊಟ್ಟಿದ್ದೀರಿ? ಎಷ್ಟು ಹಣ ಇದಕ್ಕಾಗಿ ಖರ್ಚಾಗಿದೆ ಎಂಬ ಬಗ್ಗೆ ತಿಳಿಸಿಕೊಡಬೇಕಾಗಿ ಪ್ರಾರ್ಥನೆ.

ಶ್ರೀ ಎ.ಕೃಷ್ಣಪ್ಪ : ನಮ್ಮ ಸ್ನೇಹಿತರ ಪ್ರಶ್ನೆಗಿಂತ ಉಪ-ಪ್ರಶ್ನೆಗಳ ಸರಮಾಲಿಯೇ ಜಾಸ್ತಿಯಾಗಿದೆ. ಆದ್ದರಿಂದ ನಿಮ್ಮ ಸಂಘ ಮತ್ತು ತಾವೂ ಕೂಡಿ ಬಂದರೆ ನೇರವಾಗಿ ಮುಖಾಮುಖಿ ಮಾತುಕತೆ ಮಾಡಿ ಸಮಸ್ಯೆಗಳೆಲ್ಲವನ್ನೂ ಸರ್ಕಾರ ಜೀರ್ಣ ಮಾಡಿಕೊಳ್ಳಲು ಆಗುತ್ತದೆಯೇ ಎಂಬ ಬಗ್ಗೆ ನೋಡೋಣ. ದಯಮಾಡಿ ಯಾವತ್ತಾದರೂ ಒಂದು ದಿವಸ ನಮ್ಮ ಕಛೇರಿಗೆ ತಮ್ಮ ಸಂಘದ ಪದಾಧಿಕಾರಿಗಳು ಬಂದರೆ ಸಂಪೂರ್ಣವಾಗಿ ನೇರವಾದ ಮಾತುಕತೆ ಸರ್ಕಾರ

ಮಾಡುತ್ತದೆ. ಅವರು ಉಪ ಪ್ರಶ್ನೆಗಳನ್ನು ಈ ರೀತಿ ಕೇಳಿದರೆ ನಾನು ಎಲ್ಲದಕ್ಕೂ ಮಾಹಿತಿ ತಂದಿರಲು ಆಗುತ್ತದೆಯೇ?

ಅಧ್ಯಕ್ಷರು : ನಿಮ್ಮ ಪ್ರಾಬ್ಲಮ್ಸ್ ಸಾಲ್ವ್ ಮಾಡುತ್ತೇವೆಂದು ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಅದರಲ್ಲಿ ಸೆಷನ್ 23 ಆಫ್ ಸೋಶಿಯಲ್ ವೆಲ್‌ಫೇರ್ ಪಾರ್ಟ್ ಮೆಂಟ್‌ನಲ್ಲಿ ಏನು ಹೇಳಿದ್ದಾರೆಂದರೆ, ಐದ ಸಾವಿರ ರೂಪಾಯಿಗಳನ್ನು ಬಾರ್ ಕೌನ್ಸಿಲ್ ಎನ್‌ರೋಲ್‌ಮೆಂಟ್‌ಗೆ ಕೊಡುತ್ತೇವೆ ಎಂದು ಆ ರೀತಿ ಎಷ್ಟು ಜನರಿಗೆ ಸೌಲಭ್ಯ ಕೊಟ್ಟಿದ್ದೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ : ಎಲ್ಲಾ ಪ್ರಶ್ನೆಗಳಿಗೂ ನಾನು ಉತ್ತರವನ್ನು ಸೃಷ್ಟಿಮಾಡಿಕೊಂಡು ಬಂದಿಲ್ಲ. ಅವರು ಏನು ಹೇಳಿದ್ದಾರೆ ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಇತರೆ ಸಮಸ್ಯೆಗಳಿದ್ದರೆ ಅವರು ಜೊತೆ ಮಾತನಾಡಲು ತಯಾರಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ಇದೆ ಎಂದು ಉತ್ತರ ನೀಡಿದ್ದಾರೆ. ಈಗ ನಿರುದ್ಯೋಗದ ಸಮಸ್ಯೆ ಬಹಳ ಜಾಸ್ತಿ ಇರುವುದರಿಂದ, ಅದರಲ್ಲೂ ಹರಿಜನರು, ಪರಿಶಿಷ್ಟಜಾತಿ, ವರ್ಗದವರು ಬಹಳ ಕಷ್ಟದಲ್ಲಿ ಇರುವುದರಿಂದ ಯಾರ್ಯಾರು ವಕೀಲಿ ವೃತ್ತಿಗೆ ಬರುತ್ತಾರೋ ಅವರೆಲ್ಲರಿಗೂ ಸಹಾಯಧನವನ್ನು ಕೊಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ? ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಸಮಿತಿಯೂ ಬೇಡ ಏಕೆಂದರೆ ನಿರುದ್ಯೋಗ ಸಮಸ್ಯೆ ಬಹಳಷ್ಟು ಇರುವುದರಿಂದ ಸರ್ಕಾರವೇ ತೀರ್ಮಾನ ತೆಗೆದುಕೊಂಡು ಯಾರ್ಯಾರು ವಕೀಲಿ ವೃತ್ತಿಗೆ ಬರುತ್ತಾರೆ ಅವರಿಗೆಲ್ಲಾ ಸಹಾಯಧನ ಕೊಡಲು ಸರ್ಕಾರ ಏನಾದರೂ ಯೋಚಿಸಿದೆಯೇ?

ಶ್ರೀ ಎ. ಕೃಷ್ಣಪ್ಪ : ಮೊದಲು ಆರ್ಥಿಕವಾಗಿ ಹಿಂದುಳಿದಿರತಕ್ಕ ಪರಿಶಿಷ್ಟ ಜಾತಿ, ಪಂಗಡದ ವರ್ಗಕ್ಕೆ ಸರ್ಕಾರ ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿತ್ತು. ಮಾನ್ಯ ಸುಬ್ಬಾರೆಡ್ಡಿಯವರು ಹಿಂದುಳಿದ ವರ್ಗಕ್ಕೂ ಇದನ್ನು ವಿಸ್ತರಣೆ ಮಾಡಬೇಕೆಂದು ಹೇಳಿದ್ದಾರೆ. ಮಾನ್ಯ ಶ್ರೀನಿವಾಸಗೌಡರು ಸಮಸ್ತ ಜನರು ಆರ್ಥಿಕವಾಗಿ ಯಾರು ತೊಂದರೆಯಲ್ಲಿದ್ದಾರೆ ಅವರೆಲ್ಲರಿಗೂ ಕೊಡುವಂಥ ಕೆಲಸ ಮಾಡಬೇಕು ಎಂದು ಹೇಳಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ನಾನು ಹೇಳಿದ್ದು ಪರಿಶಿಷ್ಟ ಜಾತಿ, ಪಂಗಡದವರಿಗೆ ಯಾರು ವಕೀಲಿ ವೃತ್ತಿಯನ್ನು ಪ್ರಾರಂಭ ಮಾಡುತ್ತಾರೆ, ಅವರಿಗೆ ಸಹಾಯಧನವನ್ನು ಕೊಡುವುದರಿಂದ ಸರ್ಕಾರಕ್ಕೆ ಏನು ತೊಂದರೆಯಾಗುತ್ತದೆ? ಬೊಕ್ಕಸಕ್ಕೆ ಎಷ್ಟು ಹೊರೆಯಾಗುತ್ತದೆ ಎಂಬುದು ನನ್ನ ಪ್ರಶ್ನೆ.

ಶ್ರೀ ಎ. ಕೃಷ್ಣಪ್ಪ : ಈ ಸಲಹೆಯನ್ನೇನು ಕೊಟ್ಟಿದ್ದಾರೆ ಅದರ ಪ್ರಕಾರ ಸಮಾಲೋಚನೆ ಮಾತ್ರ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದೆ ಉಳಿದಿರುವುದು

120 (821) - ಶ್ರೀ ಬಿ. ಸೋಮಶೇಕರ್ (ಮಳವಳ್ಳಿ) ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?